ಮೇಲೆ ದಾವೆ ಹಾಕಿದ್ದು ಸದರಿ ದಾವೆ ವಜಾ ಆಗಿದೆ ಎಂದು ನುಡಿಯುತ್ತಾರೆ. ದಿನಾಂಕ 28.08.2004 ರಲ್ಲಿ ನಾಗೇಶ್ ಮತ್ತು ಅವರ ಹೆಂಡತಿಗೆ, ದಿನಾಂಕ 18.03.1996 ರಲ್ಲಿ ಪ್ರೇಮ ಎನ್ನುವವರಿಗೆ ದಾವಾ ಸ್ವತ್ತಿನಲ್ಲಿದ್ದ ಎಲ್ಲಾ ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು. ಅವರ ಹೆಸರಿಗೆ ಖಾತಾ ಮತ್ತು ಇ-ಖಾತಾ ಮಾಡಿಸಿಕೊಂಡಿದ್ದಾರೆ ಎಂದರೆ ಸುಳ್ಳು. ಈಗಲೂ ಸಹ ಅವರೇ ಸದರಿ ಆಸ್ತಿಗಳ ಸ್ವಾಧೀನದಲ್ಲಿದ್ದಾರೆ ಎಂದರೆ ಸುಳ್ಳು.

(ಮುಂದುವರಿದ ಪಾಟಿ ಸವಾಲನ್ನು ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ. ಹೇ. ಕೇ. ಸರಿ ಇದೆ,

(ಪ್ರಶಾಂತಿ.ಜಿ)
9ನೇ ಅಪರ ನಗರ ಸಿವಿಲ್ ಮತ್ತು ಸತ್ರ
ನ್ಯಾಯಾಧೀಶರು, ಬೆಂಗಳೂರು.

ದಿ:06-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರಿದ ಪಾಟಿಸವಾಲು : ವಾದಿ ಪರ ಶ್ರೀ. ಸಿ.ಹೆಚ್.ಆರ್ ವಕೀಲರಿಂದ :

55. ಗೌಡರ ಅಣ್ಣಯ್ಯಪ್ಪ ಮತ್ತು ಹನುಮಂತಪ್ಪ ಸುಮಾರು 86 ಸೈಟುಗಳನ್ನು ಮಾರಿರಬಹುದು. ಈ 86 ಸೈಟುಗಳು 4 ಎಕರೆ ಜಾಗದಲ್ಲಿ

ಬರಬಹುದು. ಉಳಿದ ಜಾಗ 2 ಎಕರೆ 18 ಗುಂಟೆ ಸರ್ವೇ ನಂ.9 ರ ಕದಿರೇನಹಳ್ಳಿ ಗ್ರಾಮದಲ್ಲಿ ಬರುತ್ತದೆ. ಸಾಕ್ಷಿ ಸ್ವತಃ ಆ ಜಾಗವನ್ನೂ ಸಹ ಮಾರಿದ್ದಾರೆ ಎಂದು ನುಡಿಯುತ್ತಾರೆ. 2 ಎಕರೆ 18 ಗುಂಟೆಯಲ್ಲಿ ಒಂದೂಕಾಲು ಎಕರೆ ಜಾಗವನ್ನು ಶ್ರೀನಿವಾಸ್ ಮೂರ್ತಿ ಎಂಬುವವರಿಗೆ ಮಾರಾಟ ಮಾಡಿದ್ದಾರೆ. ಇನ್ನುಳಿದ 1 ಎಕರೆ ಜಾಗ ನಮ್ಮ ಮನೆ. 86 ಸೈಟುಗಳಲ್ಲಿ 8 ಸೈಟುಗಳನ್ನು ನನಗೆ ಮಾರಿದ್ದಾರೆ. 2 ಎಕರೆ 18 ಗುಂಟೆ ಜಾಗದಲ್ಲಿ 8 ಸೈಟುಗಳು ಕವರ್ ಆಗಿಲ್ಲ ಎಂದರೆ ಸರಿ. ಒಂದೂಕಾಲು ಎಕರೆ ಜಾಗವನ್ನು ಶ್ರೀನಿವಾಸ ಮೂರ್ತಿಯವರಿಗೆ ಮಾರಾಟ ಮಾಡಿದ್ದಾರೆ ಎಂದು ತೋರಿಸಲು ನನ್ನ ಬಳಿ ದಾಖಲೆ ಇದೆಯಾ ಎಂದರೆ ಸಾಕ್ಷಿ ನನ್ನ ಬಳಿ ಇಲ್ಲ ಆದರೆ ನಾನು ನೋಡಿದ್ದೇನೆ ಅದು ನನ್ನ ಪಕ್ಕದ ಜಾಗ ಎಂದು ನುಡಿಯುತ್ತಾರೆ. ಯಾವ ತಾರೀಖಿನಂದು ಶ್ರೀನಿವಾಸ ಮೂರ್ತಿ ಸದರಿ ಜಾಗವನ್ನು ಖರೀದಿಸಿದ್ದಾರೆ ಎಂದು ನನಗೆ ನೆನಪಿಲ್ಲ. ಶ್ರೀನಿವಾಸ ಮೂರ್ತಿಯವರಿಗೆ ಯಾವ ಜಾಗವನ್ನೂ ಕದಿರೇನಹಳ್ಳಿ ಗ್ರಾಮದಲ್ಲಿ ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ವಾದಿ ಮಾರಾಟ ಮಾಡಿಲ್ಲ ಬದಲಾಗಿ ವಾದಿ ಸುಬ್ಬಲಕ್ಷ್ಮಮ್ಮ ಅವರಿಗೆ ಮಾರಾಟ ಮಾಡಿದ್ದು ಸುಬ್ಬಲಕ್ಷ್ಮಮ್ಮ ಅವರಿಂದ ಶ್ರೀನಿವಾಸ ಮೂರ್ತಿಯವರು ಖರೀದಿಸಿದ್ದಾರೆ ಎಂದು ನುಡಿಯುತ್ತಾರೆ.

56. ಅಕ್ಕಯ್ಯಮ್ಮ ಮತ್ತು ಇತರರು ಒ.ಎಸ್.2140/1982 ರಂತೆ ಒಂದು ವಿಭಾಗಕ್ಕಾಗಿ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯ ಪ್ರಕಾರ ವಾದಿಗೆ ಈ ಎಲ್ಲಾ ಜಾಗಗಳು ಬಂದಿದೆ ಎಂದರೆ ಸರಿಯಲ್ಲ. ಒ.ಎಸ್.2140/1982 ರ ದಾವೆ 6 ಎಕರೆ 18 ಗುಂಟಕ್ಕೆ ಹಾಕಿದ್ದು ಅದರಲ್ಲಿ ಮಾರಾಟ ಮಾಡಿ ಉಳಿದ 2 ಎಕರೆ 18 ಗುಂಟೆ ಜಾಗ ವಾದಿಗೆ ಬಂದಿತ್ತು ಎಂದರೆ ಸುಳ್ಳು. 2 ಎಕರೆ 18 ಗುಂಟೆ ಜಾಗ ಹನುಮಂತಯ್ಯ ಅವರ ಹೆಂಡತಿ ಅಕ್ಕಯ್ಯಮ್ಮ ಅವರ ಹೆಸರಿಗೆ ಬಂದಿದೆ ಎಂದು ಡಿಕ್ಲೇರ್ ಆಗಿದೆ ಎಂದರೆ ಸುಳ್ಳು.

57. ಗೌಡರ ಅಣ್ಣಯ್ಯಪ್ಪ ಅವರು ಹನುಮಂತಯ್ಯ ಅವರ ಸಹೋದರ ಆಗಿದ್ದು ಹನುಮಂತಯ್ಯ ಅವರಿಗೆ ಗೊತ್ತಿಲ್ಲದಂತೆ ಹೆಚ್ಚಿನ ಎಲ್ಲಾ ಜಾಗಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ಇಬ್ಬರೂ ಸೇರಿ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಕ್ರಯ ಪತ್ರಗಳಿಗೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿದ್ದೇನಾ ಎಂದರ ಸಾಕ್ಷಿ ನಾನು ಆ ಎಲ್ಲಾ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನನಗೆ ಯಾವ ಯಾವ ದಾಖಲೆಗಳು ಸಿಕ್ಕಿವೆಯೋ ಆ ಎಲ್ಲಾ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನನ್ನ ಹೆಸರಿಗೆ ಆಗಿರುವ ಕ್ರಯ ಪತ್ರಗಳನ್ನು ಬಿಟ್ಟು ನಾನು ಬೇರೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳಲ್ಲಿ ನನಗೆ ಸದರಿ ಕ್ರಯ

ಪತ್ರಗಳನ್ನು ಹುಡುಕಿ ಹೇಳಲು ಸಾಧ್ಯವಿಲ್ಲ. ವಾದಿ ಕೇಳುತ್ತಿರುವ ಮತ್ತು ವಾದಿ ಪ್ರಶ್ನಿಸುತ್ತಿರುವ ದಾಖಲೆಗಳು ಈಗ ದಾಖಲೆಗಳಲ್ಲಿರುವ ಆಸ್ತಿ ಈಗ ವಾದಿಯ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ. ಅಕ್ಕಯ್ಯಮ್ಮ ಅವರು ಈಗಲೂ ಸಹ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

58. 8 ಕ್ರಯ ಪತ್ರಗಳಿಗೂ ನನ್ನ ಬಳಿ ಆರ್.ಟಿ.ಸಿ ಇಲ್ಲ. ದಿನಾಂಕ 18.12.1980 ರ ಕ್ರಯ ಪತ್ರಕ್ಕೆ ಆರ್.ಟಿ.ಸಿ ಇದೆ. ಸಾಕ್ಷಿ ಮುಂದುವರಿದು ಅದು ಹಳೆ ಆರ್.ಟಿ.ಸಿ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಆರ್.ಎಫ್.ಎ ರಿಸ್ಟೋರ್ ಆದ ವಿಚಾರವನ್ನು ನಾನು ಹೇಳಿಲ್ಲ ಎಂದರೆ ಸರಿ.

59. ಒ.ಎಸ್.7777/1996 ರಲ್ಲಿ ನಾನೂ ಸಹ ಪಕ್ಷಕಾರ. ಒ.ಎಸ್.7777/1996 ರಲ್ಲಿ ಆದ ಡಿಕ್ರಿಯನ್ನು ಅಕ್ಕಯ್ಯಮ್ಮ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಆರ್.ಎಫ್.ಎ ಮೂಲಕ ಪ್ರಶ್ನಿಸಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅದು ವಜಾ ಆಗಿದೆ ಎಂದು ನುಡಿಯುತ್ತಾರೆ. ಸದರಿ ಆರ್.ಎಫ್.ಎ ವಜಾ ಆಗಿಲ್ಲ ಎಂದರೆ ಸರಿಯಲ್ಲ. ನಾನು ಹಾಜುರಪಡಿಸಿದ ಎಲ್ಲಾ 8 ಕ್ರಯ ಪತ್ರಗಳು ಬೋಗಸ್ ಕ್ರಯ ಪತ್ರಗಳು ಎಂದರೆ ಸರಿಯಲ್ಲ.

60. ದಿನಾಂಕ 18.12.1980 ರ ಕ್ರಯ ಪತ್ರದಲ್ಲಿ (ನಿ.ಡಿ.1) ಉಲ್ಲೇಖಿಸಿದ ಆಸ್ತಿಗಳನ್ನು ಹೊರತುಪಡಿಸಿದರೆ ಬೇರೆ ಯಾವುದೇ ಆಸ್ತಿಗಳು ನನ್ನ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಿ.ಪಿ.1 ರ ಆಸ್ತಿಗೆ

ಸಂಬಂಧಿಸಿದಂತೆ ನಾನು ತೆರಿಗೆ ಪಾವತಿ ಮಾಡಿದ ಒಂದೂ ರಶೀದಿಗಳನ್ನೂ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

61. ನಿ.ಡಿ.2 ರಿಂದ ನಿ.ಡಿ.8 ರ ಕ್ರಯ ಪತ್ರಕ್ಕೆ ಸಂಬಂಧಿಸಿದ ಆಸ್ತಿಗಳಿಗೂ ಸಹ ನಾನು ಯಾವುದೇ ತೆರಿಗೆ ಪಾವತಿ ಮಾಡಿಲ್ಲ ಎಂದರೆ ಸರಿಯಲ್ಲ. ಆ ರೀತಿಯಾಗಿ ತೆರಿಗೆ ಪಾವತಿ ಮಾಡಿದ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

(ಮುಂದುವರಿದ ಪಾಟಿ ಸವಾಲನ್ನು ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ. ಹೇ. ಕೇ. ಸರಿ ಇದೆ,

(ಪ್ರಶಾಂತಿ.ಜಿ)
9ನೇ ಅಪರ ನಗರ ಸಿವಿಲ್ ಮತ್ತು ಸತ್ರ
ನ್ಯಾಯಾಧೀಶರು, ಬೆಂಗಳೂರು.